'ಸಾಕ್ಷಿ ಯನ್ನು ದಿಃ 07.03.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದ**

1. ನೀವು ಹಾಜರುಪಡಿಸಿದ ನಿಡಿ-1 ರಲ್ಲಿ ಯಾವ ದಿನಾಂಕದಂದು ಚೆಕ್ ಕಳೆದು ಹೋಯಿತು ಎಂದರೆ, ಅರ್ಜಿ ನೀಡಿದಕ್ಕಿಂತ ಹಿಂದೆ ಕಳೆದು ಹೋಗಿತ್ತು, ನಿಖರವಾಗಿ ಗೊತ್ತಿಲ್ಲ. ಪಿರಿಯಾಪಟ್ಟಣ ಕಾರ್ ಸ್ಟ್ಯಾಂಡ್ ನಲ್ಲಿ ಕಳುವು ಆಗಿರಬಹುದು. ಸದರಿ ವಿಚಾರವನ್ನು ಅರ್ಜಿಯಲ್ಲಿ ಹೇಳಲು ತೊಂದರೆ ಇತ್ತಾ ಎಂದರೆ, ಅರ್ಜಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.
2. ಚೆಕ್ ಕಳೆದು ಹೋದ ವಿಚಾರ ನನ್ನ ಗಮನಕ್ಕೆ 2020 ರಲ್ಲಿ ಗೊತ್ತಾಯಿತು. ಅದರ ದಿನಾಂಕ ಮತ್ತು ತಿಂಗಳು ನನಗೆ ಗೊತ್ತಿಲ್ಲ.
3. ಚೆಕ್ ಕಳೆದ ಬಗ್ಗೆ ಪೊಲೀಸರ್ ಠಾಣೆಯಲ್ಲಿ ದೂರು ನೀಡಲು ತೊಂದರೆ ಇತ್ತಾ ಎಂದರೆ, ಬ್ಯಾಂಕಿಗೆ ಅರ್ಜಿ ನೀಡಿದರೆ ಸಾಕು ನಾವೇ ಕ್ಲಿಯರ್ ಮಾಡುತ್ತೇವೆ ಎಂದು ಬ್ಯಾಂಕಿನ ಮ್ಯಾನೇಜರ್ ಹೇಳಿದ್ದರು. ಆ ಬಗ್ಗೆ ಬ್ಯಾಂಕ್ ಮ್ಯಾನೇಜರ್ ರವರನ್ನು ಸಾಕ್ಷಿ ಮಾಡಿಸಲು ತೊಂದರೆ ಇಲ್ಲ ಎಂದರೆ ಸರಿ.
4. ಚೆಕ್ ನಂ.801451 ರಿಂದ 801470 ರ ವರೆಗೆ ಕಳೆದು ಹೋಗಿದ್ದಾವೆ. ಬ್ಯಾಂಕಿನಿಂದ 20 ಚೆಕ್ ಗಳನ್ನು ನಾನು ಪಡೆದುಕೊಂಡಿದ್ದೆ. ಚೆಕ್ ಪಡೆಯಲು ಒಂದೇ ಬಾರಿ ಅರ್ಜಿ ಹಾಕಿದ್ದೆ. ಪಡೆದುಕೊಂಡಿದ್ದ ಎಲ್ಲಾ ಚೆಕ್ ಗಳು ಕಳೆದುಹೋಗಿವೆಯಾ ಎಂದರೆ, ಹೌದು.
5. ಚೆಕ್ ನಂ.801451 ರಿಂದ 801470 ಚೆಕ್ ಗಳನ್ನು ಹೊರತುಪಡಿಸಿ ನಿಮಗೆ ಯಾವುದೇ ಚೆಕ್ ವ್ಯವಹಾರ ಆಗಿಲ್ಲ ಎಂದರೆ ಸರಿ. ನಾನು ಯಾವುದೇ ಚಕ್ ವ್ಯವಹಾರವನ್ನು ಯಾರೊಂದಿಗೂ ಮಾಡಿಲ್ಲ.
6. ವೀರಭದ್ರ ಎಂಬುವವರು ನಿಮಗೆ ತಮ್ಮ ಆಗಬೇಕು ಎಂದರೆ ಸರಿ. ಸದರಿಯವರು ನಿಮ್ಮ ವಿರುದ್ಧ ಸಿಸಿ 172/2017 ರಂತೆ ಚೆಕ್ ಪ್ರಕರಣವನ್ನು ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ಹಾಕಿದ್ದರು ಎಂದರೆ, ಸರಿ. ಸದರಿ ಪ್ರಕರಣದಲ್ಲಿ ದಿಃ 17.03.2021 ರಂದು ನಿಮಗೆ ಶಿಕ್ಷೆ ಆಗಿದೆ ಎಂದರೆ ಸರಿ.
7. ಸದರಿ ಪ್ರಕರಣದಲ್ಲಿ ನೀವು ಯಾವ ವಿಚಾರವಾಗಿ ಹೇಳಿಕೆ ನೀಡಿದ್ದೀರಾ ಎಂದರೆ ಸದರಿ ವಿಚಾರ ಈಗ ನನಗೆ ನೆನಪಿಲ್ಲ.
8. ಸದರಿ ಪ್ರಕರಣದ ಚೆಕ್ ನಂಬರ್ ನನಗೆ ನೆನಪಿಲ್ಲ.
9. ರಾಜೇಶ ಬಿನ್ ಬಿ.ಟಿ.ಪುಟ್ಟೇಗೌಡರವರು ನಿಮ್ಮ ಮೇಲೆ ಪಿರಿಯಾಪಟ್ಟಣ ಠಾಣೆಯಲ್ಲಿ ಚೆಕ್ ನೀಡಿ ಮೋಸ ಮಾಡಿದ್ದಾಗಿ ದೂರು ನೀಡಿದ್ದರು ಎಂದರೆ, ನನ್ನ ಮೇಲೆ ನೀಡಿರಲಿಲ್ಲ, ನನ್ನನ್ನು ವಿಚಾರಣೆಗೆ ಕರೆದಿದ್ದರು ಅಷ್ಟೆ ಸದರಿ ದೂರು ನಿಮ್ಮ ಮೇಲೇ ನೀಡಿದ್ದರು ಎಂದರೆ ಸರಿಯಲ್ಲ.

10. ಹೆಚ್.ಎಸ್.ನಟರಾಜು ರವರು ಸಿಸಿ 110/2024 ರಂತೆ ನಿಮ್ಮ ಮೇಲೆ ಪ್ರಕರಣ ಹಾಕಿದ್ದಾರೆ ಎಂದರೆ ಸರಿ. ಹರೀಶ ಎಂಬುವವರು ಸಿಸಿ 131/2024 ರಂತೆ ನಿಮ್ಮ ಮೇಲೆ ಪ್ರಕರಣ ಹಾಕಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಎಲ್ಲರೂ ಸೇರಿ ನನಗೆ ಮೋಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಹರೀಶ ನನಗೆ ಪರಿಚಯ, ಆದರೆ ನಟರಾಜು ಯಾರು ಎಂದು ನನಗೆ ಗೊತ್ತಿಲ್ಲ.

11. ನೀವು ಒಂದು ಮನೆಯನ್ನು ಕ್ರಯ ಪಡೆದುಕೊಂಡಿದ್ದೀರಿ ಎಂದರೆ ಸರಿ. ಅದನ್ನು 2023 ರಲ್ಲಿ 32 ಲಕ್ಷಕ್ಕೆ ಕ್ರಯ ಮಾಡಿದ್ದೆ. ಸದರಿ ಹಣವನ್ನು ಸೇರಿಸಲು ನೀವು ದೂರುದಾರರಿಂದ ಸಾಲ ಮಾಡಿದ್ದೀರಿ ಎಂದರೆ ಸರಿಯಲ್ಲ, ಬ್ಯಾಂಕ್ ನಲ್ಲಿ ಸಾಲ ಮಾಡಿದ್ದೆ ಎಂದು ನುಡಿಯುತ್ತಾರೆ.

12. ನೀವು ಅನೇಕ ಜನರಿಗೆ ಚೆಕ್ ನೀಡಿ ಸಾಲ ಮಾಡುವ ಚಟ ಹೊಂದಿದ್ದೀರಾ ಎಂದರೆ ಸರಿಯಲ್ಲ.

13. ಸಾಕ್ಷಿಗೆ ಅವರ ಆರೋಪಣೆಯಲ್ಲಿರುವ ಸಹಿ ತೋರಿಸಲಾಗಿ, ಸದರಿ ಸಹಿ ತನ್ನದು ಎಂದು ನುಡಿಯುತ್ತಾರೆ.

14. ನಿಪಿ - 1 ರ ಚೆಕ್ ಮೇಲಿರುವ ಸಹಿ ತೋರಿಸಲಾಗಿ, ಅದರಲ್ಲಿರುವ ಬರವಣಿಗೆ ಹಾಗೂ ಸಹಿ ನನ್ನದಲ್ಲ ಎಂದು ನುಡಿಯುತ್ತಾರೆ.

15. ನಿಮ್ಮ ಮೇಲೆ ದೂರುದಾರರಿಗೆ ಯಾವುದೇ ರೀತಿಯ ಜಗಳ, ಮನಸ್ತಾಪ ಹಾಗೂ ದ್ವೇಷ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಬೇರೆಯವರ ಜೊತೆ ಸೇರಿ ಮೋಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

16. ದೂರುದಾರರ ಜೊತೆ ನೀವು ಮನೆ ಖರೀದಿಸುವ ಸಲುವಾಗಿ ನಿಮಗೆ ಹಣದ ಅವಶ್ಯಕತೆ ಇದ್ದರಿಂದ ದಿಃ 17.12.2023 ರಂದು ಅವರನ್ನು ಭೇಟಿ ಮಾಡಿ 8 ಲಕ್ಷ ಹಣ ಕೇಳಿದ್ದೀರಿ ಎಂದರೆ ಸರಿಯಲ್ಲ.

17. ನೀವು ಹಾಗೂ ದೂರುದಾರರು ಮೊದಲು ಚೆನ್ನಾಗಿದ್ದ ಕಾರಣ ಅವರ ಸಂಬಂಧಿಕರು ಎಂಬ ಕಾರಣಕ್ಕೆ ದಿಃ 07.01.2024 ರಂದು ನಿಮಗೆ 8 ಲಕ್ಷ ಹಣ ನೀಡುವುದಾಗಿ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ನನ್ನ ಮಾರ್ಗದರ್ಶಕರಾಗಿದ್ದರು, ಆ ಕಾರಣಕ್ಕೆ ಅವರನ್ನು ಮುಂದೆ ಇಟ್ಟುಕೊಂಡು ವ್ಯವಹಾರ ಮಾಡುತ್ತಿದ್ದೆ. ಈಗ ಬೇರೆಯವರ ಜೊತೆ ಸೇರಿ ಮೋಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

18. ನೀವು ದಿಃ 07.01.2024 ರಂದು ದೂರುದಾರರಿಂದ 8 ಲಕ್ಷ ಹಣ ಪಡೆದು ಒಂದು ತಿಂಗಳಲ್ಲಿ ವಾಪಸ್ ನೀಡುವುದಾಗಿ ಹೇಳಿದ್ದೀರಿ ಎಂದರೆ ಸರಿಯಲ್ಲ. ಸದರಿ ಸಾಲದ ಮರುಪಾವತಿಗಾಗಿ

ನೀವು ಅದೇ ದಿನ ದಿಃ 07.02.2024ರ ದಿನಾಂಕ ನಮೂದು ಮಾಡಿ ನಿಪಿ - 1ರ ಚೆಕ್ಕನ್ನು ದೂರುದಾರರಿಗೆ ನೀಡಿದ್ದೀರಿ ಎಂದರೆ ಸರಿಯಲ್ಲ.

19. ದೂರುದಾರರು ನಿವೃತ್ತ ಉಪ ಪೊಲೀಸ್ ನಿರೀಕ್ಷಕರು ಎಂದರೆ ಸರಿ. ಅವರಿಗೆ 8 ಲಕ್ಷ ಹಣ ನೀಡುವ ಶಕ್ತಿ ಇದೆ ಎಂದರೆ, ನನಗೆ ಗೊತ್ತಿಲ್ಲ, ನಾನು ಅವರೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ.

20. ಹಣಕಾಸಿನಲ್ಲಿ ದೂರುದಾರರು ಸದೃಢವಾಗಿರುವುದರಿಂದ ನಿಮ್ಮಿಂದ ಅನ್ಯಥಾ ಫಾಯಿದೆ ಹೊಂದುವ ಉದ್ದೇಶ ಇರುವುದಿಲ್ಲ ಎಂದರೆ, ನಾನು ಅವರ ಜೊತೆ ವ್ಯವಹಾರ ಮಾಡಿಲ್ಲ.

21. ನೀವು ಉದ್ದೇಶಪೂರ್ವಕವಾಗಿ ಖಾತೆಯನ್ನು ಕ್ಲೋಸ್ ಮಾಡಿಸಿ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ, ನನ್ನ ಖಾತೆ 5 ವರ್ಷದ ಹಿಂದೆ ಕ್ಲೋಸ್ ಆಗಿದೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯನ್ನು ನೀಡಿ ಮುಂದುಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ